ಸಿ.ಸಿ.ನಂಃ 77/2015 ಪಿ.ಡಬ್ಲ್ಯೂ-2

ಸಿ.ಡಬ್ಲ್ಯೂ-3

ಸಾಕ್ಷಿಯನ್ನು ದಿನಾಂಕಃ 15.11.2017 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಕೆ.ಪಿ. ವಕೀಲರಿಂದಃ

ದಿಃ 15.01.2009 ರಂದು ನಾನು ಹೆಗ್ಗಡದೇವನಕೋಟೆಯ ಅಬಕಾರಿ ಕಛೇರಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನು. ಗಸ್ತಿಗಾಗಿ ಹೋಗಲು ನನಗೆ ಚಾಸಾ-7 ರವರು ಕರೆದಿರುತ್ತಾರೆ. ಆ ಸಮಯದಲ್ಲಿ ಚಾಸಾ-7 ರವರು ಹೆಗ್ಗಡದೇವನಕೋಟೆಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿದ್ದರು ಎಂದರೆ ಸರಿ. ಆ ದಿನ ನಮ್ಮ ಕಛೇರಿಯಿಂದ ನಾನು, ಚಾಸಾ-4, 5 ಮತ್ತು 7 ರವರು ಗಸ್ತಿಗಾಗಿ ಹೋಗಿರುತ್ತೇವೆ. ಆ ದಿನ ಹುಣಸೂರು ಉಪವಿಭಾಗದ ಕಛೇರಿಯಿಂದ ವಾಹನ ಚಾಲಕ ಪುಟ್ಟರಾಜು,ಚಾಸಾ-1 ಮತ್ತು 2 ರವರು ಬಂದಿದ್ದರು. ಆ ದಿನ ಕ್ಯಾತನಹಳ್ಳಿ ಗೇಟ್ ಬಳಿ ಗಸ್ತು ಮಾಡುವಾಗಿ ಈ ಪ್ರಕರಣದ ಮಾಹಿತಿ ಬಂದಿರುತ್ತದೆ. ಕಛೇರಿಯಲ್ಲಿ ಇದ್ದ ಸಮಯದಲ್ಲಿ ಈ ಪ್ರಕರಣದ ಮಾಹಿತಿ ಬಂದಿರಲಿಲ್ಲ. ಆರೋಪಿಯ ಮನೆಯ ಮುಂದೆ 7-8 ಜನ ವ್ಯಕ್ತಿಗಳು ಬಂದು ನಿಂತಿದ್ದರು ಎಂದು ಹೇಳಿದ್ದು, ಅವರೆಲ್ಲರ ಹೆಸರು ನಾನು ಹೇಳಲಾಗುವುದಿಲ್ಲ. ಮನೆ ಆರೋಪಿಗೆ ಸೇರಿದ ಬಗ್ಗೆ ದಾಖಲಾತಿಯನ್ನು ಚಾಸಾ-7 ರವರು ನನ್ನ ಮುಂದೆ ವಶಕ್ಕೆ ಪಡೆದುಕೊಂಡಿರುವುದಿಲ್ಲ. ಸದರಿ ಮನೆಯಲ್ಲಿ ಆರೋಪಿಯು ಒಬ್ಬರೇ ಇದ್ದರು. ನಾವು ಆ ದಿನ ಆರೋಪಿಯ ಮನೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಸ್ವ ಇಚ್ಛಾ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಮಹಜರ್ ನ್ನು ಠಾಣೆಯ್ಲಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಮದ್ಯದ ಬಾಟಲ್‌ಗಳನ್ನು ತಂದು ಕೊಟ್ಟಿರುತ್ತಾರೆ ಎಂದು 1 ನೇ ಆರೋಪಿಯು ನನ್ನ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿ.

2. ಮದ್ಯದ ಬಾಟಲ್‌ಗಳನ್ನು ಅಮಾನತ್ತುಪಡಿಸಿಕೊಂಡ ಸಮಯದಲ್ಲಿ ಅವುಗಳ ಮೇಲೆ ನಾನು ಸಹಿ ಮಾಡಿರುತ್ತೇನೆ. ಅಲ್ಟ್ರಾವೈಲೆಟ್ ಬೆಳಕಿನ ಸಹಾಯದಿಂದ ಮದ್ಯದ ಬಾಟಲ್‌ಗಳು ನಕಲಿ ಎಂದು ತಿಳಿದು ಬಂದಿರುತ್ತದೆ. ಆ ದಿನ ಮಾದರಿಗಾಗಿ ತೆಗೆದುಕೊಂಡ ಬಾಟಲ್‌ಗಳು ಸೇರಿದಂತೆ ಎಲ್ಲಾ ಬಾಟಲ್‌ಗಳನ್ನು ಅಲ್ಟ್ರಾವೈಲೆಟ್ ಬೆಳಕಿನಿಂದ ಪರಿಶೀಲನೆ ಮಾಡಿರುತ್ತೇವೆ. ನಿಪಿ-1 ರ ಮಹಜರ್ ಗೆ ವಾಹನ ಚಾಲಕ ಪುಟ್ಟರಾಜುವನ್ನು ಹೊರತುಪಡಿಸಿ ಉಳಿದೆಲ್ಲಾ ಸಿಬ್ಬಂದಿಗಳು ಸಹಿ ಮಾಡಿರುತ್ತೇವೆ. ಪುಟ್ಟರಾಜುರವರು ಮಹಜರ್ ಸಮಯದಲ್ಲಿ ನಮ್ಮ ಜೊತೆಯಲ್ಲಿ ಇದ್ದರು. ಇಲಾಖಾ ಸಿಬ್ಬಂದಿಗಳನ್ನು ಹೊರತುಪಡಿಸಿ ಮಹಜರ್ ಗೆ ಬೇರೆ ಯಾರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-1 ರ ಮಹಜರ್ ನಲ್ಲಿ ಮನೆ ಸಂಖ್ಯೆ ಅಥವಾ ವಿದ್ಯುತ್ ಮೀಟರ್ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಮನೆಯು ಹಂಚಿನ ಮನೆ ಅಥವಾ ಆರ್‌ಸಿಸಿ ಮನೆ ಎಂಬ ಬಗ್ಗೆ ನಿಪಿ-1 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ಮನೆ ಮಂಗಳೂರು ಹಂಚಿನ ಮನೆಯಾಗಿದ್ದು, 2 ಕೋಣೆಗಳು ಇದ್ದವು ಎಂದು ನುಡಿಯುತ್ತಾರೆ. ನಿಪಿ-1 ನ್ನು ಠಾಣೆಯಲ್ಲಿ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಆ ದಿನ ಮಹಜರ್ ನ್ನು ಆರೋಪಿಯ ಮನೆಯ ಮುಂದೆ ಬರೆಯಲಾಗಿದೆ. ಮಹಜರ್ ಬರೆದಾಗ ರಾತ್ರಿ 9.15 ರಿಂದ 10.30 ಗಂಟೆಯಾಗಿತ್ತು. ಆ ದಿನ ನಾವು ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಲಾಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ**